ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ. 10/2025

| | | | |
|---|---|---|---|
| ಸಾಕ್ಷಿದಾರರ ಹೆಸರು | ಕೆ.ಎಸ್. ವಿನೋದ್ | ಸಿ.ಡಬ್ಲ್ಯೂ: 1 | ಪಿ.ಡಬ್ಲ್ಯೂ:1 |
| ತಂದೆಯ ಹೆಸರು | ಸಿದ್ದೇಗೌಡ | | |
| ವಯಸ್ಸು | 45 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಕಣಚೂರು ಗ್ರಾಮ, ಮೂಡಿಗೆರೆ ತಾ: | | |

ದಿನಾಂಕ: 08.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಚಾಸಾ.2 ರಿಂದ 5 ರವರ ಪರಿಚಯ ನನಗೆ ಇದೆ. ದಿ: 08.10.2024 ರಂದು ಸಂಜೆ 6.00 ಗಂಟೆಗೆ ನಾನು ದೇವಸ್ಥಾನಕ್ಕೆ ಕಣಚೂರಿನ ಕೆ.ಎಂ. ಉಮೇಶ್ ರವರ ಮನೆಯ ಹತ್ತಿರ ನನ್ನ ಕೆ.ಎ.05/ಎಂ.ಎ.3929 ಮಾರುತಿ ಕಾರನ್ನು ನಿಲ್ಲಿಸಿ ಪೂಜೆಗೆ ಹೋಗಿದ್ದೆ. ಪೂಜೆ ಮುಗಿಸಿಕೊಂಡು ರಾತ್ರಿ 8.30 ರ ಸುಮಾರಿಗೆ ಕಾರು ನಿಲ್ಲಿಸಿದ ಜಾಗಕ್ಕೆ ಬಂದು ನೋಡಲಾಗಿ ಕಾರಿ ಮುಂಬದಿಯ ಗಾಜನ್ನು ಕಲ್ಲಿನಿಂದ ಹೊಡೆದು ಹಾಕಿದ್ದರು. ನಂತರ ಎಲ್ಲರನ್ನು ವಿಚಾರಿಸಿದಾಗ ಕೆ.ಎ.18/6827 ರಲ್ಲಿ ಆರೋಪಿ ಬಂದು ಕಾರಿನ ಗಾಜನ್ನು ಹೊಡೆದು ಹೋಗಿದ್ದಾರೆ ಎಂದು ತಿಳಿಸಿದರು. ನಂತರ ಪೊಲೀಸರಿಗೆ ಕರೆ ಮಾಡಿ ಘಟನೆಯ ವಿಚಾರಗಳನ್ನು ತಿಳಿಸಿದ್ದೆ.

2. ಕಾರಿನ ಗಾಜನ್ನು ಮತ್ತು ಕಲ್ಲನ್ನು ಸೀಬೆ ಮರದ ಬಳಿ ಇಟ್ಟಿದ್ದೆ. ನಂತರ ನಾನು ನಮ್ಮ ಸಂಬಂಧಿಕರು ತೀರಿಕೊಂಡಿದ್ದರಿಂದ ಕಾರಿಗೆ ಹೊಸ ಗಾಜನ್ನು ಹಾಕಿಸಿಕೊಂಡು ನಾನು ಅವರ ಅಂತ್ಯ ಸಂಸ್ಕಾರಕ್ಕೆ ಹೋಗಿದ್ದೆ. ನಂತರ ಸಂಜೆ ಬಂದು ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ನಂತರ ದಿನಾಂಕ 15 ರಂದು ಪೊಲೀಸರು ಮಹಜರ್ ಗೆ ಬಂದಿದ್ದರು. ಮಹಜರ್

ಕಾಲದಲ್ಲಿ ಚಾಸಾ.6 ಮತ್ತು 7 ರವರು ಇದ್ದರು. ಪೊಲೀಸರು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಕಾರಿನ ಗಾಜುಗಳನ್ನು ಮತ್ತು ಕಲ್ಲನ್ನು ಮಧ್ಯಾಹ್ನ 1 ರಿಂದ 2 ರವರೆಗೆ ವಶಕ್ಕೆ ಪಡೆದರು. ನಾನು ಅದೇ ದಿನ ಸಂಜೆ ನನ್ನ ಮರು ಹೇಳಿಕೆಯನ್ನು ನೀಡಿದ್ದೆ. ಆರೋಪಿ ಗಣಪತಿ ಇಟ್ಟಂತಹ ಸಂರ್ಭದಲ್ಲಿ ಸಮುದಾಯ ಭವನದ ಬಳಿ ಬಂದು ಕುಡಿದು ಬಂದಾಗ ನಾನು ಬುದ್ದಿವಾದ ಹೇಳಿ ಕಳುಹಿಸಿದ ವಿಚಾರವಾಗಿ ಆ ದಿನ ನನ್ನ ಕಾರಿನ ಗಾಜನ್ನು ಹೊಡೆದಿರುತ್ತಾರೆ. ಕಾರಿನ ಗಾಜನ್ನು ರಾತ್ರಿ 8.15 ಕ್ಕೆ ದಿಃ 08.10.2024 ರಂದು ಆರೋಪಿ ಹೊಡೆದ ವಿಚಾರವನ್ನು ನನಗೆ ಚಾಸಾ.2 ರಿಂದ 5 ರವರು ತಿಳಿಸಿದ್ದರು.

3. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಛಾಯಚಿತ್ರಗಳಲ್ಲಿ ನಾನು ಹಾಜರಿರುತ್ತೇನೆ. ಛಾಯಚಿತ್ರಗಳನ್ನು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಹೊಡೆದು ಹೋದ ಕಾರಿನ ಗಾಜನ್ನು ಮತ್ತು ಕಲ್ಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀಮತಿ ಬಿ.ಜಿ.ಎನ್ ವಕೀಲರಿಂದ – ಆರೋಪಿತನ ಪರವಾಗಿ</u>

4. ಆರೋಪಿ ನನಗೆ 10 ವರ್ಷಗಳಿಂದ ಪರಿಚಯ. ಆರೋಪಿಯ ತಂದೆಯ ಹೆಸರು ಮಂಜೇಗೌಡ. ಕಣಚೂರು ಗ್ರಾಮ ಪಂಚಾಯಿತಿಯಲ್ಲಿ ನಾನು ಸದಸ್ಯನಾಗಿದ್ದೇನೆ. ನಾನು ಎಂ.ಎ ಪದವೀದರನಾಗಿದ್ದೇನೆ. ನಾನು ದೇವಸ್ಥಾನಕ್ಕೆ ಹೋದ ದಿನವನ್ನು ಹೇಳಲು ಆಗುವುದಿಲ್ಲ, ದಿಃ 08.10.2024 ರಂದು ಹೋಗಿರುತ್ತೇನೆ. ದೇವಸ್ಥಾನಕ್ಕೆ ನಾನು 6.00 ಗಂಟೆಗೆ ಹೋಗಿದ್ದೆ. ಆ ದಿನ ನಾನು ದೇವಸ್ಥಾನಕ್ಕೆ ಒಬ್ಬನೇ ಹೋಗಿದ್ದೆ. ದೇವಸ್ಥಾನದ ಆವರಣದ ವಿಸ್ತೀರ್ಣ 4 ಗುಂಟೆ ಇರಬಹುದು. ದೇವಸ್ಥಾನದ ಆವರಣದ ಒಳಗೆ ವಾಹನಗಳನ್ನು ನಿಲುಗಡೆ ಮಾಡುವ ವ್ಯವಸ್ಥೆ ಇದೆ ಎಂದರೆ ಸರಿಯಲ್ಲ.

ದೇವಸ್ಥಾನದ ಹೊರಗಡೆ ವಾಹನವನ್ನು ನಿಲ್ಲಿಸುವ ವ್ಯವಸ್ಥೆ ಇದೆ ಎಂದರೆ ಸರಿಯಲ್ಲ. ದೇವಸ್ಥಾನದಿಂದ ನನ್ನ ಮನೆ 4 ಕಿ.ಮೀ ಅಂತರದಲ್ಲಿ ಇದೆ. ಕೆ.ಎಸ್.ಉಮೇಶ್ ಎಂಬುವವರು ನನ್ನ ರಕ್ತ ಸಂಬಂಧಿ ಎಂದರೆ ಸರಿಯಲ್ಲ. ಆ ದಿನ ದೇವಸ್ಥಾನದಲ್ಲಿ ಪೂಜೆ ಸುಮಾರು 150 ಜನ ಸೇರಿದ್ದರು. ನಾನು ಆ ದಿನ ಪೂಜೆ ಮುಗಿಯುವವರೆಗೂ ದೇವಸ್ಥಾನದಲ್ಲಿ ಇದ್ದೆ ಎಂದರೆ ಸರಿ. ಪೂಜೆ ಮುಗಿದಾಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ನಾನು 8.30 ಕ್ಕೆ ದೇವಸ್ಥಾನದಿಂದ ಹೊರಟ್ಟಿದ್ದೆ ಎಂದು ನುಡಿಯುತ್ತಾರೆ. ನಾನು ಆ ದೇವಸ್ಥಾನದ ಕಾರ್ಯಕಾರಿ ಸಮಿತಿಯಲ್ಲಿ ಇಲ್ಲ. ನಾನು ಹಲವು ಸಂಘ ಸಂಸ್ಥೆಗಳಲ್ಲಿ ಗುರುತಿಸಿಕೊಂಡಿದ್ದೇನೆ ಎಂದರೆ ಸರಿ. ನಾನು ಚಾಸಾ.2 ರಿಂದ 5 ರವರು ಬಿ.ಜೆ.ಪಿ ಪಕ್ಷದ ಕಾರ್ಯಕರ್ತರು ಎಂದರೆ ಸರಿಯಲ್ಲ.

5. ನೀವು ಬಂದು ನೋಡಿದಾಗ ಕಾರಿನ ಗಾಜನ್ನು ಹೊಡೆದ ಮಾಹಿತಿಯನ್ನು ಆ ಊರಿನವರು ನಿಮ್ಮ ಗಮನಕ್ಕೆ ತಂದಿದ್ದರಾ ಎಂದರೆ ಸಾಕ್ಷಿ ನಾನು ನೋಡಿದ ನಂತರ ಕಾರಿನ ಗಾಜು ಹೊಡೆದದ್ದು ಕಂಡು ಬಂತು ಎಂದು ನುಡಿಯುತ್ತಾರೆ. ಕಾರಿನ ಗಾಜು ಹೊಡೆದ ತಕ್ಷಣ ಊರಿನವರು ನನ್ನ ಗಮನಕ್ಕೆ ತಂದಿಲ್ಲ ಎಂದರೆ ಸರಿ. ದೇವಸ್ಥಾನದಲ್ಲಿ ಸಿ.ಸಿ ಕ್ಯಾಮರವನ್ನು ಅಳವಡಿಸಿಲ್ಲ. ನಾನು ಕಾರನ್ನು ನಿಲ್ಲಿಸಿದ ಸ್ಥಳದಿಂದ 5 ಅಡಿ ದೂರದಲ್ಲಿ ಸೀಬೆ ಮರ ಇರುತ್ತದೆ. ಆ ದಿನ ದೇವಸ್ಥಾನದ ಆವರಣದಲ್ಲಿ 8.30 ರ ಸಮಯಕ್ಕೆ ಆರೋಪಿ ನನಗೆ ಕಂಡು ಬಂದಿದ್ದ. ಆರೋಪಿಯವರ ಹೆಂಡತಿ ಹಂತೂರು ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಕಾರನ್ನು ನಿಲ್ಲಿಸಿದ ಸ್ಥಳದ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಸರ್ಕಾರಿ ರಸ್ತೆ ಇದೆ, ಉತ್ತರ ಮತ್ತು ದಕ್ಷಿಣಕ್ಕೆ ಖಾಲಿ ಜಾಗ ಇರುತ್ತದೆ. ಪಕ್ಕದಲ್ಲಿ ಉಮೇಶ್ ರವರ ಮನೆ ಇರುತ್ತದೆ. ದೇವಸ್ಥಾನದಿಂದ ಉಮೇಶ್ ರವರ ಮನೆ 100 ಅಡಿ ಅಂತರದಲ್ಲಿ ಇದೆ. ನಾನು ಬಂದು ನೋಡಿದಾಗ ಕಾರಿನ ಮುಂಭಾಗದ ಗಾಜು ಹೊಡೆದಿತ್ತು. ನಾನು ನೋಡಿದಾಗ ಗಾಜಿನ ಮೇಲೆ ಕಲ್ಲು ಇತ್ತು. ಕಾರಿನ ಮುಂಭಾಗದ ಸಂಪೂರ್ಣ ಗಾಜು ಜಖಂ ಆಗಿತ್ತು.

6. ದಿಃ 08.10.2024 ರಂದು ವಿಪರೀತಿ ಗಾಳಿ ಮಳೆ ಇತ್ತು ಎಂದರೆ ಸಾಕ್ಷಿ ಅಷ್ಟಾಗಿ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು 15 ನೇ ತಾರೀಖಿನಂದು ಮರು ಹೇಳಿಕೆಯನ್ನು ನೀಡಿರುತ್ತೇನೆ. ದಿಃ 17.10.2024 ರಂದು ನನ್ನ ಕಾರಿನ ಗಾಜು ಹಾನಿಯಾಗಿರಲಿಲ್ಲ ಎಂದರೆ ಸುಳ್ಳು. ನಾನು ಪೊಲೀಸರಿಗೆ ಘಟನೆಯ ಮಾಹಿತಿಯನ್ನು ನೀಡಿದಾಗ ಪೊಲೀಸರು ಸ್ಪಂದಿಸಿದ್ದರು. ಪೊಲೀಸರು ಮಾಹಿತಿಯನ್ನು ನೀಡಿದ ಸಮಯದಲ್ಲಿ ಸ್ಥಳಕ್ಕೆ ಬಂದಿರಲಿಲ್ಲ. ಪೊಲೀಸರಿಗೆ ನಾನು ಸ್ಥಳಕ್ಕೆ ಬರುವಂತೆ ಮಾಹಿತಿ ನೀಡಿದಾಗ ತಿಳಿಸಿದ್ದೆ. ಘಟನೆ ನಡೆದ ದಿನವೇ ನನ್ನ ತಾಯಿಯ ಸಂಬಂಧಿ ಮೃತಪಟ್ಟ ವಿಚಾರ ತಿಳಿದಿದ್ದರಿಂದ ನಾನು ಅದೇ ದಿನ ದೂರು ನೀಡಲು ಹೋಗಲಿಲ್ಲ. ಮರು ದಿನ ಸಂಜೆ ನಾನು ದೂರನ್ನು ನೀಡಿದ್ದೇನೆ. ದೂರಿನಲ್ಲಿ ನಾನು ದೂರು ನೀಡಲು ವಿಳಂಬ ಆದ ಕಾರಣವನ್ನು ಹೇಳಿದ್ದೇನೆ ಎಂದರೆ ಹೇಳಿಲ್ಲ. ದೂರನ್ನು ನೀಡಲು ಆದ ವಿಳಂಬದ ಕಾರಣವನ್ನು ದೂರಿನಲ್ಲಿ ತಿಳಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

7. ನಿ.ಪಿ.3 ಛಾಯಚಿತ್ರದಲ್ಲಿ ನಾನು ಹಾಜರಿದ್ದೇನೆ ಎಂದರೆ ಸರಿ. ನಿ.ಪಿ.3 ಅನ್ನು ತೆಗೆದಾಗ ರಾತ್ರಿ 8.30 ರ ನಂತರದ ಸಮಯ ಆಗಿತ್ತು. ನಿ.ಪಿ.3 ಛಾಯಚಿತ್ರವನ್ನು ಯಾರು ತೆಗೆದಿದ್ದಾರೆ ಎಂದು ಹೇಳಲು ಆಗುವುದಿಲ್ಲ, ನಮ್ಮವರೇ ಒಬ್ಬರು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.3 ಛಾಯಚಿತ್ರವನ್ನು ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ತೆಗೆದಿದ್ದಾರೆ. ನಿ.ಪಿ.3 ಛಾಯಚಿತ್ರ ನನ್ನ ಕಾರಿನ ಗಾಜು ಹೊಡೆದು ಹೋದ ಛಾಯಚಿತ್ರ ಎಂದರೆ ಸರಿ. ನಿ.ಪಿ.3 ಛಾಯಚಿತ್ರದಲ್ಲಿ ನಾನು ಹೇಳಿದಂತಹ ಕಲ್ಲು ಕಂಡು ಬರುತ್ತಿಲ್ಲ ಎಂದರೆ ಸರಿ. ಛಾಯಚಿತ್ರಗಳನ್ನು ತೆಗೆದರೆ ಆ ಛಾಯಚಿತ್ರಗಳ ಮೇಲೆ ದಿನಾಂಕ ಮತ್ತು ಸಮಯ ನಮೂದಾಗುತ್ತದೆ ಎಂದರೆ ಸರಿ. ನಿ.ಪಿ.3 ಛಾಯಚಿತ್ರದ ಮೇಲೆ ಸಮಯ ಮತ್ತು ದಿನಾಂಕ ಕಂಡು ಬರುವುದಿಲ್ಲ ಎಂದರೆ ಸರಿ.

8. ನಾನು ಕಾರಿನ ಗಾಜನ್ನು ಮರು ದಿನ ಬೆಳಿಗ್ಗೆ ಮೂಡಿಗೆರೆಯ ಶಬರಿ ಆಟೋ ಮೊಬೈಲ್ ನಲ್ಲಿ ಹಾಕಿಸಿಕೊಂಡಿದ್ದೇನೆ. ನಾನು ಹೊಸ ಗಾಜನ್ನು ಕಾರಿಗೆ ಹಾಕಿಸಿಕೊಂಡ ಬಾಬ್ತು ರಸೀದಿಯನ್ನು ಪೊಲೀಸರಿಗೆ ನೀಡಿದ್ದೇನೆ. ದಿಃ

15.10.2024 ರಂದು ಪೊಲೀಸರು ಮಹಜರ್ ಗೆ ಬಂದಿದ್ದರು. ಮಹಜರ್ ಗೆ ಬರುವಂತೆ ಸಾಕ್ಷಿದಾರರಿಗೆ ನಾನು ತಿಳಿಸಿಲ್ಲ. ಮಹಜರ್ ಅನ್ನು ಸುಮಾರು 1 ಗಂಟೆಗಳ ಕಾಲ ಮಾಡಿದ್ದರು. ಮಹಜರ್ ಗೆ ನಾನು ಸಹಿ ಮಾಡಿದ್ದೇನೆ. ಮಹಜರ್ ಎಷ್ಟು ಪುಟಗಳು ಇತ್ತು ಎಂದು ನಾನು ನೋಡಿಲ್ಲ, ಅದನ್ನು ಓದಿದ್ದೇನೆ. ಮಹಜರ್ ತಯಾರಿಸಲು ಮಾಹಿತಿಯನ್ನು ಪಿ.ಎಸ್.ಐ ರವರು ತಿಳಿಸಿದ್ದರು. ಮಹಜರ್ ಗೆ ಬಂದಾಗ ಇಬ್ಬರು ಪೊಲೀಸರು ಇದ್ದರು. ನಿಪಿ.2 ಛಾಯಚಿತ್ರದಲ್ಲಿ ಒಬ್ಬ ಪೊಲೀಸರು ಮಾತ್ರ ಇದ್ದರು ಎಂದರೆ ಸಾಕ್ಷಿ ಇನ್ನೊಬ್ಬ ಪೊಲೀಸರು ಛಾಯಚಿತ್ರವನ್ನು ತೆಗೆಯುತ್ತಿದ್ದರು ಎಂದು ನುಡಿಯುತ್ತಾರೆ. ನಿ.ಪಿ.2 ರಲ್ಲಿ ದಿನಾಂಕ ಮತ್ತು ಸಮಯ ನಮೂದಾಗಿಲ್ಲ ಎಂದರೆ ಸರಿ. ನಿ.ಪಿ.2 ಛಾಯಚಿತ್ರವನ್ನು ತೆಗೆದಾಗ 2 ಗಂಟೆಯ ಒಳಗಿನ ಸಮಯ ಆಗಿತ್ತು.

9. ನಾನು ಕಾರು ನಿಲ್ಲಿಸಿ ಹೋದ ರಸ್ತೆ ಸಾರ್ವಜನಿಕ ರಸ್ತೆಯಾಗಿತ್ತು ಎಂದು ಹೇಳಿಲ್ಲ. ಇದೇ ನ್ಯಾಯಾಲಯದಲ್ಲಿ ನನ್ನ ಮೇಲೆ ಕ್ರಿಮಿನಲ್ ಪ್ರಕರಣಗಳು ವಿಚಾರಣೆ ಇದೆ ಎಂದರೆ ಸಾಕ್ಷಿ ಆ ಪ್ರಕರಣಗಳು ಖುಲಾಸೆಯಾಗಿದೆ ಎಂದು ನುಡಿಯುತ್ತಾರೆ. ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿ ನನಗೆ ಶಿಕ್ಷೆಯಾಗಿದೆ ಎಂದರೆ ಸಾಕ್ಷಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಮೇಲೆ ರೌಡಿ ಶೀಟರ್ ತೆರೆಯಲಾಗಿದೆ ಎಂದರೆ ಸರಿಯಲ್ಲ.

10. ಆರೋಪಿಗೆ ನಾನು ಗಣೇಶನ ಹಬ್ಬದಲ್ಲಿ ಎಚ್ಚರಿಗೆ ನೀಡಿದ್ದೆ ಎಂದು ದೂರಿನಲ್ಲಿ ಹೇಳಿದ್ದೇನೆ ಎಂದರೆ ಸರಿ. ನಾನು ಆರೋಪಿಗೆ ಪ್ರತಿ ಹಬ್ಬದಲ್ಲಿಯು ಪ್ರತಿ ಬಾರಿಯು ತೊಂದರೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಾರಿನ ಮೇಲೆ ಯಾವುದೇ ವಸ್ತುಗಳು ಬಿದ್ದರು ಗಾಜು ಹೊಡೆದು ಹೋಗುತ್ತದೆ ಎಂದರೆ ಸರಿಯಲ್ಲ. ನಾನು ನೀಡಿದ ದೂರಿಗೂ ಮತ್ತು ನನ್ನ ಮರು ಹೇಳಿಕೆಗೂ ಸಾಕಷ್ಟು ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ನನ್ನ ಮೇಲೆ ದ್ವೇಷ ಸಾರುವವರು ಮತ್ತು ನನಗೆ ಆಗದವರು ಯಾರು ಇಲ್ಲ. ಕಣಚೂರು ಗ್ರಾಮ ಪಂಚಾಯಿತಿಯಲ್ಲಿ ಆರೋಪಿಯ ಹೆಂಡತಿ ಕೆಲಸ ಮಾಡುತ್ತಿರುವ ವಿಚಾರವಾಗಿ ನಾನು ಆರೋಪಿಯ ಬಳಿ ಜಗಳ ಮಾಡಿದ್ದೇನೆ ಎಂದರೆ ಸರಿಯಲ್ಲ.

11. ಮಹಜರ್ ಕಾಲದಲ್ಲಿ ಮು.ಮಾ.1 ಮತ್ತು 2 ಅನ್ನು ನಾನೇ ಪೊಲೀಸರಿಗೆ ನೀಡಿದ್ದೆ. ಮು.ಮಾ.1 ಮತ್ತು 2 ರ ಮೇಲೆ ಪೊಲೀಸರು ನನ್ನ ಸಹಿಯನ್ನು ಪಡೆದಿಲ್ಲ. ನನ್ನ ಕಾರಿಗೆ ಮುಂಬದಿಯ ಗಾಜನ್ನು ಹೊರತುಪಡಿಸಿ ಇತರ ಕಡೆ ಯಾವುದೇ ಹಾನಿ ಆಗಿರಲಿಲ್ಲ. ಮು.ಮಾ.2 ಕಲ್ಲು ನನ್ನ ಕಾರಿನ ಮೇಲೆ ಇದ್ದ ಕಲ್ಲು ಅಲ್ಲ ಎಂದರೆ ಸರಿಯಲ್ಲ. ಉದ್ದೇಶ ಪೂರ್ವಕವಾಗಿ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ನಾನು ಪ್ರತಿಬಾರಿ ಮನಸ್ತಾಪ ಮಾಡಿಕೊಳ್ಳುತ್ತಿದ್ದ ಕಾರಣ ಆತನ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ಈ ಪ್ರಕರಕ್ಕೆ ಸಂಬಂಧಪಟ್ಟಿದಲ್ಲ ಎಂದರೆ ಸರಿಯಲ್ಲ. ಚಾಸಾ.2 ರಿಂದ 6 ನನ್ನ ಸ್ನೇಹಿತರಾಗಿರುವುದರಿಂದ ಈ ಕೇಸಿನಲ್ಲಿ ಸಾಕ್ಷಿಯಾಗಿ ಹೆಸರಿಸಿದ್ದೇನೆ ಎಂದರೆ ಸರಿಯಲ್ಲ.

12. ನಾನು ಸ್ಥಳದಲ್ಲಿ ಮಹಜರ್ ಗೆ ಸಹಿ ಮಾಡಿದ್ದೇನೆ. ನಾನು ನೀಡಿದ ದೂರು ಒಂದು ಪುಟ ಇತ್ತು. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿಗೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ